20/10/23 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ದೇಹಸಹಿತವಾಗಿ ಎಲ್ಲವನ್ನೂ ಮರೆತು ಒಬ್ಬ ತಂದೆಯನ್ನು ನೆನಪು ಮಾಡಿ, ಆಗ ಸ್ವಂತ ಮಕ್ಕಳೆಂದು ಹೇಳಬಹುದು, ಈ ಹಳೆಯ ಪ್ರಪಂಚದಿಂದ ಈಗ ನಿಮ್ಮ ಬುದ್ಧಿ ದೂರ ಹೋಗಬೇಕಾಗಿದೆ"

ಪ್ರಶ್ನೆ: ತಂದೆಯ ಜ್ಞಾನವು ಎಂತಹ ಮಕ್ಕಳ ಬುದ್ಧಿಯಲ್ಲಿ ಸಹಜವಾಗಿ ಕುಳಿತುಬಿಡುತ್ತದೆ?

ಉತ್ತರ: ಯಾರು ಬಡಮಕ್ಕಳಾಗಿದ್ದಾರೆ, ಯಾರ ಮೋಹವು ನಷ್ಟವಾಗಿದೆ ಮತ್ತು ಬುದ್ಧಿಯು ವಿಶಾಲವಾಗಿದೆಯೋ ಅವರ ಬುದ್ಧಿಯಲ್ಲಿ ಇಡೀ ಜ್ಞಾನವು ಸಹಜವಾಗಿ ಕುಳಿತುಬಿಡುತ್ತದೆ. ಬಾಕಿ ಯಾರ ಬುದ್ಧಿಯಲ್ಲಿರುತ್ತದೆ - ನಮ್ಮ ಧನ, ನಮ್ಮ ಪತಿ....... ಎಂದು, ಅವರು ಜ್ಞಾನವನ್ನು ಧಾರಣೆ ಮಾಡಿ ಶ್ರೇಷ್ಠ ಪದವಿಯನ್ನು ಪಡೆಯಲು ಸಾಧ್ಯವಿಲ್ಲ. ತಂದೆಯ ಮಕ್ಕಳಾದ ನಂತರವೂ ಲೌಕಿಕ ಸಂಬಂಧಗಳನ್ನು ನೆನಪು ಮಾಡುವುದೆಂದರೆ ಕಚ್ಚಾ ನಿಶ್ಚಿತಾರ್ಥವಾಗಿದೆ. ಅಂತಹವರಿಗೆ ಮಲತಾಯಿ ಮಕ್ಕಳು ಎಂದು ಕರೆಯಲಾಗುತ್ತದೆ.

ಗೀತೆ: ಸತ್ತರೂ ನಿಮ್ಮ ಮಡಿಲಿನಲ್ಲಿಯೇ..........................

ಓಂ ಶಾಂತಿ. ಮಧುರಾತಿ ಮಧುರ ಮಕ್ಕಳು ಗೀತೆಯ ಅರ್ಥವನ್ನು ತಾವಾಗಿಯೇ ತಿಳಿದುಕೊಂಡಿರಬಹುದು. ಈಗ ಬದುಕಿದ್ದಾಗಲೇ ಬಂದು ತಂದೆಗೆ ಮಕ್ಕಳಾಗಬೇಕು ಮತ್ತು ಹಳೆಯ ಪ್ರಪಂಚ ಯಾವುದಕ್ಕೆ ರೌರವ ನರಕವೆಂದು ಹೇಳಲಾಗುತ್ತದೆಯೋ ಅದನ್ನು ಮರೆಯಲೇಬೇಕು ಮತ್ತು ಬಿಡಲೇಬೇಕಾಗಿದೆ. ರೌರವ ನರಕವನ್ನು ಮರೆತು ನಂತರ ಸ್ವರ್ಗವನ್ನು ನೆನಪು ಮಾಡಬೇಕು. ತನ್ನನ್ನು ಆತ್ಮನೆಂದು ತಿಳಿದು ತನ್ನ ತಂದೆಯನ್ನು ನೆನಪು ಮಾಡಬೇಕು. ಹಳೆಯ ಪ್ರಪಂಚವು ಬುದ್ಧಿಯಿಂದ ದೂರವಾಗಬೇಕು. ಅದಕ್ಕಾಗಿ ಪುರುಷಾರ್ಥ ಮಾಡಬೇಕು. ಇದು ಜನ್ಮ-ಜನ್ಮಾಂತರದ ಕರ್ಮಬಂಧನವಾಗಿದೆ, ಒಂದು ಜನ್ಮದ್ದಲ್ಲ ಜನ್ಮ-ಜನ್ಮಾಂತರದ ಕರ್ಮಬಂಧನವಾಗಿದೆ. ಎಷ್ಟು ಪಾಪ ಯಾರ್ಯಾರೊಂದಿಗೆ ಮಾಡಿದ್ದೀರಿ, ಅದೆಲ್ಲವನ್ನೂ ಜನ್ಮ ಪಡೆದು ಭೋಗಿಸಲೇಬೇಕಾಗುತ್ತದೆ ಅಂದಮೇಲೆ ಕರ್ಮಬಂಧನದ ಪ್ರಪಂಚವನ್ನು ಮರೆಯಲೇಬೇಕಾಗಿದೆ. ಇದು ಕೊಳಕು ಪ್ರಪಂಚವಾಗಿದೆ, ಪತಿತ ಶರೀರವಾಗಿದೆಯಲ್ಲವೆ. ಇದರೊಂದಿಗಿರುವ ಮೋಹವನ್ನು ಕಳೆಯಬೇಕು. ಬಡವರ ಮೋಹವು ಸಹಜವಾಗಿ ಕಳೆದುಹೋಗುತ್ತದೆ, ಸಾಹುಕಾರರಿಗೆ ಮೋಹವನ್ನು ಬಿಡುವುದರಲ್ಲಿ ಬಹಳ ಪರಿಶ್ರಮವಾಗುತ್ತದೆ. ನಾವು ಸ್ವರ್ಗದಲ್ಲಿ ಸುಖಿಯಾಗಿ ಕುಳಿತಿದ್ದೇವೆಂದು ಸಾಹುಕಾರರು ತಿಳಿಯುತ್ತಾರೆ. ಬಡವರು ದುಃಖಿಯಾಗಿದ್ದಾರೆ. ಹಾಗೆ ನೋಡಿದರೆ ಇಡೀ ಭಾರತವೇ ಬಡರಾಷ್ಟ್ರವಾಗಿದೆ ಅದರಲ್ಲಿಯೂ ಯಾರು ಬಡವರಿದ್ದಾರೆ ಅವರು ಬಹಳ ಬೇಗ ಜ್ಞಾನವನ್ನು ತೆಗೆದುಕೊಳ್ಳುತ್ತಾರೆ. ಅವರಿಗಾಗಿಯೇ ತಂದೆಯು ಬರುತ್ತಾರೆ. ಬಡವರಿಗೆ ಹೆಚ್ಚು ಆಸ್ತಿಯು ದೊರೆಯುತ್ತದೆ. ಎಲ್ಲಾ ಸೇವಾಕೇಂದ್ರಗಳಲ್ಲಿ ನೋಡಿದರೆ ಸಾಹುಕಾರರು ಉಳಿಯುವುದು ಬಹಳ ಕಷ್ಟಕರ. ಸ್ತ್ರೀಯರೂ ಸಹ ಬಡವರ ಮನೆಯವರೇ ಬರುತ್ತಾರೆ, ಧನವಂತರಿಗಂತೂ ಪತಿಯಿಂದ ಸುಖ ಸಿಗುತ್ತದೆ ಆದ್ದರಿಂದ ಅವರಿಂದ ಬುದ್ಧಿಯೋಗವು ದೂರವಾಗಲು ಸಾಧ್ಯವಿಲ್ಲ. ಮೆಜಾರಿಟಿ ಬಡವರೇ ಜ್ಞಾನವನ್ನು ತೆಗೆದುಕೊಳ್ಳುವರು. ತಂದೆಯು ಬಡವರ ಬಂಧುವಾಗಿದ್ದಾರೆ, ಆ ತಂದೆಯನ್ನು ಎಲ್ಲರೂ ನೆನಪು ಮಾಡುತ್ತಾರೆ ಆದರೆ ಡ್ರಾಮಾದ ಅನುಸಾರವಾಗಿ ಭಕ್ತರು ಭಗವಂತನನ್ನು ತಿಳಿದುಕೊಂಡಿಲ್ಲ. ಭಗವಂತನಂತೂ ಭಕ್ತರ ರಕ್ಷಕನಾಗಿದ್ದಾರೆ. ಭಕ್ತಿಯ ಫಲವನ್ನು ಕೊಡುವಂತಹವರು, ಸದ್ಗತಿದಾತ ಒಬ್ಬ ತಂದೆಯೇ ಆಗಿದ್ದಾರೆ. ತಾವು ಮಕ್ಕಳು ತಂದೆಯ ಮೂಲಕ ಈಗ ಜ್ಞಾನದ ಮಾತುಗಳನ್ನು ಕೇಳುತ್ತಿದ್ದೀರಿ. ಯಾರ ಬುದ್ಧಿಯು ವಿಶಾಲವಾಗಿದೆಯೋ, ಮೋಹ ನಷ್ಟವಾಗಿದೆಯೋ ಅಂತಹ ಮಕ್ಕಳ ಬುದ್ಧಿಯಲ್ಲಿ ಮಾತ್ರ ಜ್ಞಾನದ ಧಾರಣೆಯಾಗುತ್ತದೆ. ಯಾರ ಬುದ್ಧಿಯಲ್ಲಿ ನನ್ನ ಪತಿ, ನಮ್ಮ ಧನ... ಇತ್ಯಾದಿ ಬುದ್ಧಿಯಲ್ಲಿರುತ್ತದೆ ಅವರು ಶ್ರೇಷ್ಠ ಪದವಿಯನ್ನು ಪಡೆಯಲು ಸಾಧ್ಯವಿಲ್ಲ. ಯಾರು ರಚಯಿತ ಮತ್ತು ರಚನೆಯ ಜ್ಞಾನವನ್ನು ಕೊಡುತ್ತಾರೆಯೋ ಅವರು ಪದವಿಯನ್ನು ಪಡೆಯುತ್ತಾರೆ. ತಂದೆಯನ್ನು ಅರಿತುಕೊಳ್ಳದ ವಿನಃ ಆಸ್ತಿಯು ಹೇಗೆ ಸಿಗುವುದು? ಪ್ರಿಯತಮನಿಗೆ ಕೇವಲ ಪ್ರಿಯತಮನೆಂದು ಹೇಳುವುದರಿಂದ ಏನೂ ಲಾಭ ದೊರೆಯುವುದಿಲ್ಲ. ತಿಳಿದುಕೊಳ್ಳದ ವಿನಃ ಪ್ರಿಯತಮನೊಂದಿಗೆ ನಿಶ್ಚಿತಾರ್ಥ ಹೇಗೆ ಸಾಧ್ಯ? ಕನ್ಯೆಯ ನಿಶ್ಚಿತಾರ್ಥವಾಗುತ್ತದೆ ಆಗ ಅವರಿಗೆ ಅವರ ಚಿತ್ರ ಇತ್ಯಾದಿಯನ್ನು ತೋರಿಸುತ್ತಾರೆ. ಇವರು ಇಂತಹವರ ಮಗ, ಅವರ ವೃತ್ತಿ ಇದಾಗಿದೆ... ಹಿಂದೆ ಅವರ ಫೋಟೊವನ್ನು ತೋರಿಸುತ್ತಿರಲಿಲ್ಲ ಹಾಗೆಯೇ ಅವರ ವಿವಾಹವನ್ನು ಮಾಡಿಬಿಡುತ್ತಿದ್ದರು. ಆದರೆ ಅವರ ವೃತ್ತಿಯನ್ನು ಹೇಳುತ್ತಿದ್ದರು. ಇಲ್ಲಿಯೂ ಕೆಲವು ಮಕ್ಕಳು ತನ್ನ ತಂದೆಯನ್ನು ಅಥವಾ ಪ್ರಿಯತಮನನ್ನು ತಿಳಿದುಕೊಂಡೇ ಇಲ್ಲ ಅಂದಾಗ ನಿಶ್ಚಿತಾರ್ಥವು ಹೇಗೆ ಸಾಧ್ಯ? ನಂಬರ್ವಾರ್ ಇದ್ದಾರೆ. ಕೆಲವರ ನಿಶ್ಚಿತಾರ್ಥವು ಅರ್ಧಂಬರ್ಧವಾಗಿದೆ. ಪಾರಲೌಕಿಕ ಪ್ರಿಯತಮನನ್ನು ನೆನಪು ಮಾಡುವುದಿಲ್ಲ. ಲೌಕಿಕ ಪ್ರಿಯತಮನನ್ನು, ಲೌಕಿಕ ಸಂಬಂಧಿಗಳು, ಮುಂತಾದವರನ್ನು ನೆನಪು ಮಾಡುತ್ತಿರುತ್ತಾರೆ ಅಂದಮೇಲೆ ಕಚ್ಚಾ ನಿಶ್ಚಿತಾರ್ಥವಾಗಿದೆ. ಅವರನ್ನು ಮಲತಾಯಿ ಮಕ್ಕಳೆಂದು ಹೇಳಲಾಗುತ್ತದೆ, ಪಕ್ಕಾ ಇರುವವರಿಗೆ ಸ್ವಂತ ಮಕ್ಕಳೆಂದು ಹೇಳಲಾಗುತ್ತದೆ. ಸ್ವಂತಮಕ್ಕಳು ಬಹಳ ಕಡಿಮೆಯಿದ್ದಾರೆ. ಭಟ್ಟಿಯಲ್ಲಿ ಎಷ್ಟೊಂದು ಜನ ಕುಳಿತಿದ್ದರೂ ಅವರಲ್ಲಿಯೂ ಎಷ್ಟು ಮಂದಿ ಅರ್ಧಂಬರ್ಧವಾಗಿ ಹೊರಟುಹೋದರು. ತನ್ನ ಪ್ರಿಯತಮನನ್ನು ಅರಿತುಕೊಂಡೇ ಇಲ್ಲ. ಹೇಗೆ ಪಾದರಸವು ಕೈಯಲ್ಲಿ ನಿಲ್ಲುವುದೇ ಇಲ್ಲವಲ್ಲವೆ ಹಾಗೆಯೇ ನೆನಪೂ ಸಹ ಅಷ್ಟು ಕಷ್ಟಕರ. ಪದೇ-ಪದೇ ಮರೆತುಬಿಡುತ್ತಾರೆ.

25-30 ವರ್ಷದವರೂ ಸಹ ನೆನಪು ಮಾಡಲು ಸಾಧ್ಯವಿಲ್ಲ. ನೀವು ತಿಳಿದುಕೊಂಡಿದ್ದೀರಿ, ಪಾರಲೌಕಿಕ ಪ್ರಿಯತಮ ಸ್ವರ್ಗದ 21 ಜನ್ಮಗಳಿಗಾಗಿ ಮಹಾರಾಜ-ಮಹಾರಾಣಿಯನ್ನಾಗಿ ಮಾಡುವಂತಹವರಾಗಿದ್ದಾರೆ. ಸೃಷ್ಟಿಯ ಆದಿ-ಮಧ್ಯ-ಅಂತ್ಯವನ್ನು ಬಲ್ಲವರಾಗಿದ್ದಾರೆ. ಪ್ರಿಯತಮೆಯರಿಗೆ ಇಷ್ಟೊಂದು ತಿಳಿಸಿಕೊಡುತ್ತಾರೆ ಆದರೂ ಸಹ ಬುದ್ಧಿಯಲ್ಲಿ ಕುಳಿತುಕೊಳ್ಳುವುದಿಲ್ಲ. ಬುದ್ಧಿಯು ಹಳೆಯ ಪ್ರಪಂಚ ಸಂಬಂಧಗಳಲ್ಲಿ ಅಲೆದಾಡುತ್ತಿರುತ್ತದೆ. ನಾನು ಬಂಧನದಲ್ಲಿದ್ದೇನೆ ಎಂದು ತಿಳಿದುಕೊಳ್ಳುವುದೇ ಇಲ್ಲ. ಸಂಬಂಧವಂತೂ ಒಬ್ಬರದೇ ಬೇಕಾಗಿದೆ, ಉಳಿದೆಲ್ಲವೂ ಬಂಧನವಾಗಿದೆ. ಆದ್ದರಿಂದ ಒಬ್ಬರ ಜೊತೆ ಸಂಬಂಧವನ್ನಿಡಿ ಅವರು ನಿಮಗೆ ಸೃಷ್ಟಿಯ ಆದಿ-ಮಧ್ಯ-ಅಂತ್ಯದ ಶಿಕ್ಷಣವನ್ನು ಕೊಡುತ್ತಾರೆ ಎಂದು ಮಕ್ಕಳಿಗೆ ತಿಳಿಸಿಕೊಡಲಾಗುತ್ತದೆ.

ನೀವು ತಿಳಿದುಕೊಂಡಿದ್ದೀರಿ - ಅರ್ಧಕಲ್ಪ ಜ್ಞಾನಕಾಂಡವಾಗಿದೆ, ಅರ್ಧಕಲ್ಪ ಭಕ್ತಿಕಾಂಡವಾಗಿದೆ. ಜ್ಞಾನಕಾಂಡದಲ್ಲಂತೂ 21 ಜನ್ಮಗಳ ಆಸ್ತಿಯು ದೊರೆಯುತ್ತದೆ. ಅದು ಸತೋಪ್ರಧಾನವಾದದ್ದು, ನಂತರ ಸತೋಪ್ರಧಾನಕ್ಕಿಂತ ಕೆಳಗಡೆ ಸತೋದಲ್ಲಿ ಬರುತ್ತೇವೆ ನಂತರ ಸತೋದಿಂದ ರಜೋದಲ್ಲಿ ಬರಬೇಕು. ಯಾವಾಗ ಸತೋ ಪೂರ್ಣವಾಗುತ್ತದೆಯೋ ಆಗ ಜ್ಞಾನಕಾಂಡವು ಪೂರ್ಣವಾಗಿಬಿಡುತ್ತದೆ. ದ್ವಾಪರದಿಂದ ಭಕ್ತಿಯು ಪ್ರಾರಂಭವಾಗುತ್ತದೆ. ಅದೂ ಸಹ ಮೊದಲು ಸತೋಪ್ರಧಾನವಾದಂತಹ ಭಕ್ತಿಯಾಗಿರುತ್ತದೆ ನಂತರ ಭಕ್ತಿಯು ಸತೋ, ರಜೋ, ತಮೋದಲ್ಲಿ ಬರುತ್ತದೆ. ವ್ಯಭಿಚಾರಿಯಾಗುವುದರಿಂದ ಭಕ್ತಿಯು ಪುನಃ ಕನಿಷ್ಠವಾಗುತ್ತಾ ಹೋಗುತ್ತದೆ. ಈಗ ಇದನ್ನು ತಿಳಿದುಕೊಂಡು ಯಾರಿಗಾದರೂ ತಿಳಿಸಿಕೊಡುವುದು ಬಹಳ ಸಹಜವಾಗಿದೆ. ನೀವು ಮಕ್ಕಳಿಗೆ ರೌರವ ನರಕದಿಂದ ಸಂಬಂಧವನ್ನು ಬಿಟ್ಟು ಒಬ್ಬರೊಂದಿಗೆ ಇಡಬೇಕು. ಒಬ್ಬ ತಂದೆಯೊಂದಿಗೆ ಸಂಬಂಧವನ್ನು ಇಡುವ ಅಭ್ಯಾಸ ಮಾಡಬೇಕು. ತಂದೆಯನ್ನು ನೆನಪು ಮಾಡುವುದರಿಂದಲೇ ವಿಕರ್ಮವು ವಿನಾಶವಾಗುತ್ತದೆ. ಬಡವರು ಚೆನ್ನಾಗಿ ಪರಿಶ್ರಮಪಡುತ್ತಾರೆ ಅಂದಮೇಲೆ ಬಲಿಹಾರಿಯು ಬಡವರದೇ ಆಗಿದೆ. ತಂದೆಯೂ ಸಹ ಬಡವರ ಮೇಲೆಯೇ ಬಲಿಹಾರಿಯಾಗುತ್ತಾರೆ. ಪ್ರಾರಂಭದಲ್ಲಿ ಎಷ್ಟೊಂದು ಗೋಪ-ಗೋಪಿಕೆಯರಿದ್ದರು, ಮಾತೆಯರಿದ್ದರು! ಅವರಲ್ಲಿ ಎಷ್ಟೊಂದು ಮಂದಿ ಹೊರಟುಹೋದರು ಆದರೆ ಕೆಲವರಷ್ಟೇ ಉಳಿದರು, ಮಾತೆಯರೂ ಕೆಲವರಷ್ಟೇ ಉಳಿದರು. ಹಾ! ಕೆಲಕೆಲವರು ಶ್ರೀಮಂತ ಮನೆಯವರೂ ಉಳಿದುಕೊಂಡರು. ಹೇಗೆ ಕ್ವೀನ್ ಮದರ್, ದೇವಿ ಮುಂತಾದವರಿದ್ದರು. ಈಗ ನೀವು ಮೂಲ ಮಾತನ್ನು ತಿಳಿಸಿಕೊಡಬೇಕಾಗಿದೆ. ಯಾವ ಭಗವಂತನನ್ನು ಎಲ್ಲರೂ ನೆನಪು ಮಾಡುತ್ತಾರೆ ಅವರ ಪರಿಚಯವೇನಾಗಿದೆ? ಪತಿತ-ಪಾವನ ತಂದೆಯು ಯಾವ ರಾಜಯೋಗವನ್ನು ಕಲಿಸಿ ನರನಿಂದ ನಾರಾಯಣನನ್ನಾಗಿ ಮಾಡುತ್ತಾರೆಯೋ ಅವರನ್ನು ತಿಳಿದುಕೊಂಡಿಲ್ಲವೆಂದರೆ ನೀವು ಪಾಪವನ್ನೇ ಮಾಡುತ್ತಿರುತ್ತೀರಿ ಎಂದರ್ಥ. ತಂದೆಗೆ ಗ್ಲಾನಿ ಮಾಡುತ್ತಿರುತ್ತಾರೆ. ಸಮ್ಮೇಳನಗಳಂತೂ ಬಹಳಷ್ಟು ಆಗುತ್ತಿರುತ್ತವೆ, ಅಲ್ಲಿ ತಿಳಿಸಿಕೊಡಲು ಬಹಳ ತೀಕ್ಷ್ಣವಾದವರು ಬೇಕು. ನೀವು ವೇದಗಳ ಮಹಿಮೆಯನ್ನು ತಿಳಿಸುತ್ತೀರಿ ಆದರೆ ಇದರಿಂದ ಯಾವುದೇ ಲಾಭವಾಗುವುದಿಲ್ಲ ಎಂದು ತಿಳಿಸಬೇಕು. ಲಾಭವಂತೂ ಒಬ್ಬ ತಂದೆಯಿಂದಲೇ ಆಗುತ್ತದೆ. ಅವರನ್ನು ನಾವು ತಿಳಿದುಕೊಂಡಿದ್ದೇವೆ ನೀವು ತಿಳಿದುಕೊಂಡಿಲ್ಲ. ನೀವೂ ಬಂದರೆ ನಾವು ನಿಮಗೆ ತಿಳಿಸುತ್ತೇವೆ. ತಂದೆಯನ್ನು ತಿಳಿದುಕೊಳ್ಳದ ವಿನಃ ಆಸ್ತಿಯು ಹೇಗೆ ಸಿಗುತ್ತದೆ? ತಂದೆಯ ಆಸ್ತಿಯಂತೂ ಮುಕ್ತಿ-ಜೀವನ್ಮುಕ್ತಿ, ಗತಿ-ಸದ್ಗತಿ ಆಗಿದೆ. ಈ ಶಬ್ಧಗಳನ್ನು ತಂದೆಯಷ್ಟೇ ತಿಳಿಸುತ್ತಾರೆ ಆದ್ದರಿಂದ ನೀವು ಮಕ್ಕಳು ನೆನಪಿಟ್ಟುಕೊಳ್ಳಬೇಕು. ಮತ್ತೆ ಯಾವ ವಸ್ತುವಿನಿಂದ ಯಾವ ಲಾಭವೂ ಇಲ್ಲ. ತಂದೆಯನ್ನು ಮತ್ತು ರಚನೆಯ ಆದಿ-ಮಧ್ಯ-ಅಂತ್ಯವನ್ನು ತಿಳಿಯಬೇಕು. ಅದರಲ್ಲಿಯೂ ಅರ್ಧಕಲ್ಪ ಭಕ್ತಿಕಾಂಡ, ಅರ್ಧಕಲ್ಪ ಸದ್ಗತಿ ಅಂದರೆ ಜ್ಞಾನಕಾಂಡ. ಭಲೆ ಸಮ್ಮೇಳನಗಳನ್ನು ಮಾಡುತ್ತಾರೆ ಆದರೆ ಸ್ವಯಂ ತಬ್ಬಿಬ್ಬಾಗಿದ್ದಾರೆ, ಏನೂ ತಿಳಿದುಕೊಳ್ಳುವುದಿಲ್ಲ. ನೀವು ಎಲ್ಲರಿಗೂ ತಂದೆಯ ಪರಿಚಯವನ್ನು ತಿಳಿಸಬೇಕು. ಯಾವಾಗ ಬಹಳ ಮಂದಿಗೆ ಪರಿಚಯವು ಸಿಕ್ಕಿಬಿಡುತ್ತದೆಯೋ ಆಗ ಕಮಾಲ್ ಎಂದು ಹೇಳಬಹುದು. ಇದಂತೂ ಇಡೀ ಸೃಷ್ಟಿಯ ಆದಿ-ಮಧ್ಯ-ಅಂತ್ಯದ ರಹಸ್ಯವನ್ನು ಚಿತ್ರಗಳ ಸಹಿತವಾಗಿ ತಿಳಿಸಿಕೊಡಲಾಗುತ್ತದೆ. ಮಾತೆಯರಿಗೆ ಬಹಳಷ್ಟು ನಶೆಯಿರಬೇಕು. ಪುರುಷರು ಸಹಯೋಗ ಕೊಡುವುದಕ್ಕಾಗಿ ತಯಾರಾಗಿದ್ದಾರೆ, ಸಲಹೆಯನ್ನು ತಂದೆಯು ಕೊಡುತ್ತಾರೆ ಅಂದಾಗ ಕನ್ಯೆಯರು, ಮಾತೆಯರು ಮಾಡಬೇಕಾಗಿದೆ. ಇಂದಿನ ದಿನಗಳಲ್ಲಿ ಕನ್ಯೆಯರು, ಮಾತೆಯರ ಮಹಿಮೆಯು ಹೆಚ್ಚಾಗಿದೆ. ರಾಜ್ಯಪಾಲರು, ಪ್ರಧಾನಮಂತ್ರಿಯೂ ಸಹ ಮಾತೆಯರೇ ಆಗುತ್ತಾರೆ. ಒಂದುಕಡೆ ಆ ಮಾತೆಯರಿದ್ದಾರೆ ಇನ್ನೊಂದು ಕಡೆ ನೀವು ಪಾಂಡವ ಮಾತೆಯರಿದ್ದೀರಿ. ಅವರ ಪ್ರಭಾವವು ಹೆಚ್ಚಾಗಿದೆ ಏಕೆಂದರೆ ಅವರ ರಾಜ್ಯವೇ ಇದೆ. ನಿಮಗಂತೂ ಮೂರು ಹೆಜ್ಜೆಗಳ ಭೂಮಿಯೂ ಸಿಗುವುದಿಲ್ಲ.

ತಂದೆಯು ನೀವು ಮಕ್ಕಳಿಗೆ ಅನೇಕ ರಹಸ್ಯಗಳನ್ನು ತಿಳಿಸುತ್ತಿರುತ್ತಾರೆ. ನೀವೀಗ ಸ್ವರ್ಗದ ಆಸ್ತಿಯನ್ನು ಪಡೆಯುತ್ತೀರಿ. ಪ್ರಿಯತಮ ನಿಮ್ಮನ್ನು ಶೃಂಗರಿಸುತ್ತಾರೆ, ಮಹಾರಾಣಿಯನ್ನಾಗಿ ಮಾಡುತ್ತಾರೆ. ಇಂತಹ ಪ್ರಿಯತಮನೊಂದಿಗೆ ಬುದ್ಧಿಯೋಗವನ್ನಿಡದೇ ಇರುವುದು ಬಹಳ ದೊಡ್ಡ ತಪ್ಪಾಗಿದೆ. ಮಕ್ಕಳಿಗಂತೂ ಬಹಳ ತಿಳಿಸಿಕೊಡುತ್ತಾರೆ - ನೀವು ಕೇವಲ ಜ್ಞಾನ ಮತ್ತು ಭಕ್ತಿಯ ವ್ಯತ್ಯಾಸವನ್ನು ತಿಳಿಸಿರಿ. ಭಾರತದಲ್ಲಿಯೇ ಗಾಯನವಿದೆ - ದುಃಖದಲ್ಲಿ ಎಲ್ಲರೂ ಸ್ಮರಿಸುತ್ತಾರೆ, ಸುಖದಲ್ಲಿ ಯಾರೂ ಸ್ಮರಿಸುವುದಿಲ್ಲ. ಸುಖದಲ್ಲಿ ಏಕೆ ನೆನಪು ಮಾಡುತ್ತಾರೆ? ಈಗ ಆ ಹೊಸ ಪ್ರಪಂಚವು ಸ್ಥಾಪನೆಯಾಗುತ್ತಾ ಇದೆ. ಆದರೆ ಸುಖದ ಆಸ್ತಿಯನ್ನು ಸಂಪೂರ್ಣವಾಗಿ ಪಡೆಯಬೇಕಾಗಿದೆ. ಪ್ರತಿಯೊಬ್ಬರೂ ಎಷ್ಟು ಯೋಗ್ಯರಾಗಿದ್ದಾರೆ ಎಂಬುದನ್ನು ಮಾತ್ರಿತಾರವರು ತಿಳಿದುಕೊಂಡಿದ್ದಾರೆ. ಮೃತ್ಯುವು ಯಾವಾಗ ಸಮೀಪ ಬರುತ್ತದೆಯೋ ಆಗ ತಿಳಿಸುತ್ತೇನೆ ಆಗ ನೀವು ಪುರುಷಾರ್ಥವನ್ನು

ಸಂಪೂರ್ಣವಾಗಿ ಮಾಡಿಲ್ಲವೆಂದರ್ಥ ಆದ್ದರಿಂದಲೇ ನಿಮ್ಮ ಗತಿಯು ಹೀಗಾಗಿದೆ. ನೀವು ಯಾವ ವರ್ಗದ ಪ್ರಜೆಯಾಗಿದ್ದೀರಿ ಮತ್ತು ಯಾವ ವರ್ಗದ ನೌಕರರು-ಚಾಕರರು ಆಗುತ್ತೀರಿ ಎನ್ನುವುದೆಲ್ಲವನ್ನೂ ತಿಳಿಸುತ್ತೇನೆ. ಒಳ್ಳೆಯದು.

ಇಂದು ನಾನು ಬಹಳ ಚೆನ್ನಾಗಿ ಮುರುಳಿಯನ್ನು ನುಡಿಸಿದೆನೆಂದು ಕೆಲವು ಮಕ್ಕಳು ತಿಳಿಯುತ್ತಾರೆ. ಹಾಗೇನಲ್ಲ, ಇದಂತೂ ಶಿವತಂದೆಯು ಬಂದು ಸಹಾಯ ಮಾಡುತ್ತಾರೆ. ತನ್ನ ಅಹಂಕಾರವಿರಬಾರದು, ನಿಮಗಂತೂ ತಂದೆಯು ಕಲಿಸುತ್ತಾರೆ ಅದನ್ನೇ ನೀವು ತಿಳಿಸುತ್ತೀರಿ. ಒಂದುವೇಳೆ ತಂದೆಯೇ ಇಲ್ಲದಿದ್ದರೆ ನಿಮ್ಮ ಮುರುಳಿಯು ಏನಾಗುತ್ತಿತ್ತು. ಮುರುಳೀಧರನ ಮಕ್ಕಳಂತೂ ಮುರುಳೀಧರರಾಗಲೇಬೇಕು. ಇಲ್ಲವೆಂದರೆ ಶ್ರೇಷ್ಠ ಪದವಿಯನ್ನು ಪಡೆಯಲು ಸಾಧ್ಯವಿಲ್ಲ. ಭಲೆ ಸ್ವಲ್ಪವಾದರೂ ಲಾಭವಾಗುತ್ತದೆ. ಯಾರಾದರೂ ಸೇವಾಕೇಂದ್ರವನ್ನು ತೆರೆದರೆ ಆಗ ಅವರಿಗೆ ಬಹಳ ಆಶೀರ್ವಾದ ಸಿಗುತ್ತದೆ. ಇಷ್ಟು ಸಮಯ ವಿದ್ಯೆಯನ್ನು ಓದಿದ್ದೀರಿ ಅಂದಾಗ ತಾವಾಗಿಯೇ ಸರ್ವೀಸ್ ಮಾಡಿ ಸೇವಾಕೇಂದ್ರವನ್ನು ಸಂಭಾಲನೆ ಮಾಡಬೇಕಾಗಿದೆ. ತಾವು ಕಲಿಯುವಿರೆಂದರೆ ಅನ್ಯರಿಗೆ ಕಲಿಸಲಾಗುವುದಿಲ್ಲವೆ? ಇಂತಹ ಬ್ರಹ್ಮಾಕುಮಾರಿ ಸಹೋದರಿಯು ಬೇಕೆಂದು ಕೇಳುತ್ತಾರೆಂದರೆ ಬಹುಷಃ ಇವರಲ್ಲಿ ಅಷ್ಟೊಂದು ಜ್ಞಾನವಿಲ್ಲವೆಂದು ತಂದೆಯು ತಿಳಿಯುತ್ತಾರೆ. ಅಂತಹವರು ಇಲ್ಲಿ ಬಂದು ಏನು ಮಾಡುತ್ತಾರೆ. ತಂದೆಯು ತಿಳಿಸುತ್ತಾರೆ - ಮೋಡಗಳು ಬರಲಿ ಬಂದು ರಿಫ್ರೆಷ್ ಆಗಿ ಹೋಗಿ ಮಳೆಯನ್ನು ಸುರಿಸಲಿ ಇಲ್ಲವೆಂದರೆ ಪದವಿಯನ್ನು ಹೇಗೆ ಪಡೆಯುತ್ತೀರಿ? ಮಮ್ಮಾ-ಬಾಬಾ ಎಂದು ಹೇಳುತ್ತೀರೆಂದರೆ ಅವರ ಸಿಂಹಾಸನವನ್ನು ಹಿಡಿದುಕೊಂಡು ತೋರಿಸಿ, ನಾವು ತಿಳಿಸಿಕೊಟ್ಟೆವೆಂಬ ಅಹಂಕಾರವೂ ಸಹ ಯಾರಿಗೂ ಬರಬಾರದು. ನೀವು ಏನೂ ಕೊಡುವುದಿಲ್ಲವೆಂದರೆ ತಂದೆಯೂ ಸಹ ನಿಮಗೆ ಕವಡೆಗೆ ಬದಲಾಗಿ ವಜ್ರ ಕೊಡುವುದರಿಂದ ದೂರವಾಗುತ್ತಾರೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತಾ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಒಬ್ಬ ತಂದೆಯ ಜೊತೆ ಸರ್ವ ಸಂಬಂಧವನ್ನು ಇಟ್ಟುಕೊಂಡು ಬುದ್ಧಿಯೋಗವನ್ನು ಅನೇಕ ಸಂಬಂಧಗಳಿಂದ ತೆಗೆದುಹಾಕಬೇಕಾಗಿದೆ. ಒಬ್ಬರ ಜೊತೆ ಪಕ್ಕಾ ನಿಶ್ಚಿತಾರ್ಥ ಮಾಡಿಕೊಳ್ಳಬೇಕಾಗಿದೆ. ಬುದ್ಧಿಯೋಗವು ಅಲೆದಾಡಿಸಬಾರದಾಗಿದೆ.

2. ತಂದೆಯ ಸಮಾನ ಮುರುಳೀಧರರಾಗಬೇಕು, ನಾನು ಮುರುಳಿಯನ್ನು ಚೆನ್ನಾಗಿ ನುಡಿಸಿದೆನು ಎನ್ನುವ ಅಹಂಕಾರವು ಬರಬಾರದಾಗಿದೆ. ಮೋಡಗಳನ್ನು ತುಂಬಿಸಿಕೊಂಡು ಮಳೆ ಸುರಿಸಬೇಕಾಗಿದೆ. ವಿದ್ಯೆಯನ್ನು ಓದಿದ್ದೀರೆಂದರೆ ಸೇವಾಕೇಂದ್ರವನ್ನು ಸಂಭಾಲನೆ ಮಾಡಬೇಕಾಗಿದೆ.

ವರದಾನ: ತಂದೆಯನ್ನು ಎದುರಿನಲ್ಲಿಟ್ಟು ಕೊಂಡು ಈರ್ಷ್ಯಾ ರೂಪಿ ಪಾಪದಿಂದ ತಪ್ಪಿಸಿಕೊಳ್ಳುವಂತಹ ವಿಶೇಷ ಆತ್ಮ ಭವ

ಬ್ರಾಹ್ಮಣ ಆತ್ಮರಲ್ಲಿ ನಿಷ್ಪ್ರಯೋಜಕತೆ ಇರುವ ಕಾರಣ ಈರ್ಷ್ಯೆ ಉತ್ಪನ್ನವಾಗುವುದು, ಈರ್ಷ್ಯೆಯ ಕಾರಣ ಸಂಸ್ಕಾರಗಳ ಘರ್ಷಣೆಯಾಗುವುದು ಆದರೆ ಇದರಲ್ಲಿ ವಿಶೇಷವಾಗಿ ಯೋಚಿಸಿ ಒಂದು ವೇಳೆ ನಿಷ್ಪ್ರಯೋಜಕತನ ಯಾವುದಾದರೂ ವಿಶೇಷ ಕಾರ್ಯದ ನಿಮಿತ್ತ ಆಗಿದ್ದರೆ ಆಗ ಅವರನ್ನು ನಿಮಿತ್ತರನ್ನಾಗಿ ಮಾಡಿದವರು ಯಾರು! ತಂದೆಯನ್ನು ಎದುರಿಗೆ ತಂದುಕೊಳ್ಳಿ ಆಗ ಈರ್ಷ್ಯಾರೂಪಿ ಮಾಯೆ ಓಡಿಹೋಗಿಬಿಡುವುದು. ಒಂದುವೇಳೆ ಯಾರದೇ ಮಾತು ನಿಮಗೆ ಸರಿ ಎನ್ನಿಸದಿದ್ದರೆ ಶುಭಭಾವನೆಯಿಂದ ಮೇಲೆ ತನ್ನಿ, ಈರ್ಷ್ಯೆವಶ ಅಲ್ಲ. ಪರಸ್ಪರರಲ್ಲಿ ರೇಸ್ ಮಾಡಿ ದ್ವೇಶದಿಂದಲ್ಲ ಆಗ ವಿಶೇಷ ಆತ್ಮ ಆಗಿಬಿಡುವಿರಿ.

ಸ್ಲೋಗನ್: ನೀವು ತಂದೆಯನ್ನು ನಿಮ್ಮ ಜೊತೆಗಾರರನ್ನಾಗಿ ಮಾಡಿಕೊಳ್ಳುವಂತಹ ಮತ್ತು ಮಾಯೆಯ ಆಟವನ್ನು ಸಾಕ್ಷಿಯಾಗಿ ನೋಡುವಂತಹವರಾಗಿರುವಿರಿ.

ಮಾತೇಶ್ವರೀ ಯವರ ಮಹಾವಾಕ್ಯ:

1."ನಿಮ್ಮ ಸತ್ಯವಾದ ಉದ್ದೇಶ ಏನು?"

ಮೊಟ್ಟಮೊದಲು ತಮ್ಮ ಸತ್ಯವಾದ ಉದ್ದೇಶವೇನು? ಎಂಬುದನ್ನು ತಿಳಿಯುವ ಅವಶ್ಯಕತೆಯಿದೆ, ಅದೂ ಸಹ ಸರಿಯಾದ ರೀತಿ ಬುದ್ಧಿಯಲ್ಲಿ ಧಾರಣೆ ಮಾಡಬೇಕಾಗಿದೆ ಆಗ ಮಾತ್ರ ಪೂರ್ಣ ರೀತಿಯಲ್ಲಿ ಆ ಉದ್ದೇಶದಲ್ಲಿ ಉಪಸ್ಥಿತರಾಗಲು ಸಾಧ್ಯ. ತಮ್ಮ ಸತ್ಯವಾದ ಉದ್ದೇಶವಾಗಿದೆ- ನಾನು ಆತ್ಮ ಆ ಪರಮಾತ್ಮನ ಸಂತಾನನಾಗಿದ್ದೇನೆ. ವಾಸ್ತವಿಕವಾಗಿ ಕರ್ಮಾತೀತನಾಗಿದ್ದೇನೆ

ನಂತರ ತಮ್ಮನ್ನು ತಾವು ಮರೆಯುವ ಕಾರಣ ಕರ್ಮಬಂಧನದಲ್ಲಿ ಬಂದೆನು, ಈಗ ಮತ್ತೆ ಆ ನೆನಪು ಬಂದಿರುವುದರಿಂದ, ಈ ಈಶ್ವರೀಯ ಯೋಗದಲ್ಲಿರುವ ಕಾರಣ ನಾನು ಮಾಡಿರುವ ವಿಕರ್ಮವನ್ನು ವಿನಾಶ ಮಾಡಿಕೊಳ್ಳುತ್ತಿದ್ದೇನೆ. ಅಂದಾಗ ನನ್ನ ಉದ್ದೇಶವಾಗಿದೆ ನಾನು ಆತ್ಮ ಪರಮಾತ್ಮನ ಸಂತಾನನಾಗಿದ್ದೇನೆ. ಉಳಿದಂತೆ ಯಾರಾದರೂ ತಮಗೆ ತಾವು ದೇವತೆಯೆಂದು ತಿಳಿದು ಆ ಲಕ್ಷ್ಯದಲ್ಲಿ ಸ್ಥಿತರಾಗಿದ್ದರೆ ಅದರ ನಂತರ ಪರಮಾತ್ಮನ ಯಾವ ಶಕ್ತಿಯಿದೆ ಅದು ಪ್ರಾಪ್ತಿಯಾಗುವುದಿಲ್ಲ. ಮತ್ತು ಇದರಿಂದ ನಿಮ್ಮ ವಿಕರ್ಮ ವಿನಾಶವಾಗುವುದಿಲ್ಲ, ಆದರೆ ಇಲ್ಲಂತೂ ನಿಮಗೆ ಪೂರ್ಣ ಜ್ಞಾನವಿದೆ, ನಾನು ಆತ್ಮ ಪರಮಾತ್ಮನ ಸಂತಾನ ಕರ್ಮಾತೀತನಾಗಿ ಭವಿಷ್ಯದಲ್ಲಿ ಹೋಗಿ ಜೀವನ್ಮುಕ್ತ ದೇವೀದೇವತಾ ಪದವಿಯನ್ನು ಪಡೆಯುತ್ತೇನೆ, ಈ ಲಕ್ಷ್ಯದಲ್ಲಿ ಇರುವುದರಿಂದ ಆ ಶಕ್ತಿಯು ಸಿಕ್ಕಿಬಿಡುತ್ತದೆ. ಈಗ ಮನುಷ್ಯ ನನಗೆ ಸುಖ-ಶಾಂತಿ, ಪವಿತ್ರತೆ ಬೇಕೆಂದು ಬಯಸುತ್ತಾನೆ, ಅದೂ ಸಹ ಯಾವಾಗ ಪೂರ್ಣಯೋಗವಿರುತ್ತದೆ ಆಗ ಮಾತ್ರ ಪ್ರಾಪ್ತಿಯಾಗುತ್ತದೆ. ಉಳಿದಂತೆ ದೇವತಾ ಪದವಿಯಂತೂ ಭವಿಷ್ಯದ ಪ್ರಾಲಬ್ಧವಾಗಿದೆ. ತನ್ನ ಪುರುಷಾರ್ಥ ಬೇರೆ ಮತ್ತು ತನ್ನ ಪ್ರಾಲಬ್ಧವೂ ಬೇರೆಯಾಗಿದೆ. ಅಂದರೆ ಈ ಗುರಿ ಉದ್ದೇಶಕೂಡ ಬೇರೆಯಾಗಿದೆ, ಆದರೆ ತಾವು ಈ ಒಂದು ಲಕ್ಷ್ಯದಲ್ಲಿ ಇರಬಾರದಾಗಿದೆ ನಾನು ಪವಿತ್ರ ಆತ್ಮ ಕೊನೆಯಲ್ಲಿ ಪರಮಾತ್ಮನಾಗಿಬಿಡುತ್ತೇನೆ, ಇಲ್ಲ. ಆದರೆ ನಮಗೆ ಪರಮಾತ್ಮನ ಜೊತೆ ಯೋಗ ಜೋಡಿಸಿ ಪವಿತ್ರ ಆತ್ಮ ಆಗಬೇಕಾಗಿದೆ, ಉಳಿದಂತೆ ಆತ್ಮನು ಯಾವುದೇ ಪರಮಾತ್ಮ ಆಗುವುದಿಲ್ಲ.

2.”ಈ ಅವಿನಾಶಿ ಜ್ಞಾನಕ್ಕೆ ಅನೇಕ ಹೆಸರುಗಳನ್ನಿಟ್ಟಿದ್ದಾರೆ”

ಈ ಅವಿನಾಶಿ ಈಶ್ವರೀಯ ಜ್ಞಾನಕ್ಕೆ ಅನೇಕ ಹೆಸರುಗಳನ್ನಿಟ್ಟಿದ್ದಾರೆ. ಕೆಲವರು ಈ ಜ್ಞಾನವನ್ನು ಅಮೃತವೆಂದೂ ಹೇಳುತ್ತಾರೆ, ಕೆಲವರು ಈ ಜ್ಞಾನವನ್ನು ಅಂಜನವೆಂದೂ ಹೇಳುತ್ತಾರೆ. ಗುರುನಾನಕ್ ಸಹಾ ಹೇಳಿದ್ದಾರೆ ಜ್ಞಾನ ಅಂಜನ ಗುರು ಕೊಟ್ಟರು, ಕೆಲವರು ಮತ್ತೆ ಜ್ಞಾನದ ಮಳೆಯೆಂದೂ ಹೇಳಿದ್ದಾರೆ ಏಕೆಂದರೆ ಈ ಜ್ಞಾನದಿಂದಲೇ ಇಡೀ ಸೃಷ್ಟಿ ಹಚ್ಚಹಸಿರಾಗುತ್ತದೆ. ಯಾರೆಲ್ಲಾ ತಮೋಪ್ರಧಾನ ಮನುಷ್ಯರಿದ್ದಾರೆ ಅವರೆಲ್ಲಾ ಸತೋಗುಣಿ ಮನುಷ್ಯರಾಗಿಬಿಡುತ್ತಾರೆ ಮತ್ತು ಜ್ಞಾನ ಅಂಜನದಿಂದ ಅಂಧಕಾರ ದೂರವಾಗಿಬಿಡುತ್ತದೆ. ಇದೇ ಜ್ಞಾನವನ್ನು ಮತ್ತೆ ಅಮೃತವೆಂದೂ ಹೇಳುತ್ತಾರೆ ಯಾವುದರಿಂದ ಮನುಷ್ಯ 5 ವಿಕಾರಗಳಿಂದ ಸುಡುತ್ತಿದ್ದಾನೆ ಅದರಿಂದ ಶೀತಲವಾಗಿಬಿಡುತ್ತಾನೆ. ಗೀತೆಯಲ್ಲೂ ನೋಡಿ ಪರಮಾತ್ಮ ಸ್ಪಷ್ಟವಾಗಿ ಹೇಳುತ್ತಾನೆ ಕಾಮೇಷು, ಕ್ರೋಧೇಷು ಅದರಲ್ಲೂ ಮೊದಲನೆಯದು ಕಾಮ ಮುಖ್ಯವಾಗಿದೆ, 5 ವಿಕಾರಗಳಲ್ಲಿ ಮುಖ್ಯ ಬೀಜವಾಗಿದೆ. ಬೀಜಯಿರುವುದರಿಂದ ನಂತರ ಕ್ರೋಧ, ಲೋಭ, ಮೋಹ ಅಹಂಕಾರ ಮುಂತಾದುವುಗಳ ವೃಕ್ಷ ಹುಟ್ಟಿಕೊಳ್ಳುತ್ತದೆ, ಅದರಿಂದ ಮನುಷ್ಯನ ಬುದ್ಧಿ ಭ್ರಷ್ಟವಾಗಿಬಿಡುತ್ತದೆ. ಈಗ ಅದೇ ಬುದ್ಧಿಯಲ್ಲಿ ಜ್ಞಾನದ ಧಾರಣೆಯಾಗುತ್ತದೆ, ಯಾವಾಗ ಬುದ್ಧಿಯಲ್ಲಿ ಜ್ಞಾನದ ಧಾರಣೆ ಪೂರ್ಣವಾಗಿ ಆಗುತ್ತದೆ ಆಗಲೇ ವಿಕಾರಗಳ ಬೀಜ ಸಮಾಪ್ತಿ ಆಗಿಬಿಡುತ್ತದೆ. ಉಳಿದಂತೆ ಸನ್ಯಾಸಿಗಳು ತಿಳಿಯುತ್ತಾರೆ ವಿಕಾರಗಳನ್ನು ವಶದಲ್ಲಿ ಇಟ್ಟುಕೊಳ್ಳುವುದು ಬಹಳ ಕಠಿಣ ಮಾತಾಗಿದೆ ಎಂದು. ಈಗ ಈ ಜ್ಞಾನ ಸನ್ಯಾಸಿಗಳಲ್ಲಿ ಇಲ್ಲವೇ ಇಲ್ಲ. ಅಂದಾಗ ಇಂತಹ ಶಿಕ್ಷಣವನ್ನು ಕೊಡುವುದು ಹೇಗೆ? ಸುಮ್ಮನೆ ಹೀಗೇ ಹೇಳಿಬಿಡುತ್ತಾರೆ ಮರ್ಯಾದೆಯಲ್ಲಿರಿಯೆಂದು. ಆದರೆ ಸತ್ಯವಾದ ಮರ್ಯಾದೆ ಯಾವುದಾಗಿದೆ? ಆ ಮರ್ಯಾದೆ ಇತ್ತೀಚೆಗೆ ಮುರಿದುಬಿದ್ದಿದೆ, ಎಲ್ಲಿ ಆ ಸತ್ಯಯುಗೀ, ತ್ರೇತಾಯುಗಿ ದೇವೀದೇವತೆಗಳ ಮರ್ಯಾದೆ ಯಾವುದು ಗೃಹಸ್ಥದಲ್ಲಿರುತ್ತಾ ಹೇಗೆ ನಿರ್ವಿಕಾರಿ ಪ್ರವೃತ್ತಿಯಲ್ಲಿ ಇರುತ್ತಿದ್ದರು. ಈಗ ಅಂತಹ ಸತ್ಯವಾದ ಮರ್ಯಾದೆ ಎಲ್ಲಿದೆ? ಇತ್ತೀಚಿನ ದಿನಗಳಲ್ಲಂತೂ ಉಲ್ಟಾ ವಿಕಾರೀ ಮರ್ಯಾದೆ ಪಾಲನೆ ಮಾಡುತ್ತಿದ್ದಾರೆ, ಪರಸ್ಪರರಲ್ಲಿ ಹೀಗೆ ಕಲಿಸಿಕೊಡುತ್ತಾರೆ ಮರ್ಯಾದೆಯಿಂದ ನಡೆಯಿರಿ ಎಂದು, ಮನುಷ್ಯನ ಮೊದಲನೇ ಕರ್ತವ್ಯ ಏನು, ಅದನ್ನಂತೂ ಯಾರೂ ತಿಳಿದುಕೊಂಡಿಲ್ಲ, ಕೇವಲ ಇಷ್ಟೇ ಪ್ರಚಾರ ಮಾಡುತ್ತಾರೆ ಮರ್ಯಾದೆಯಲ್ಲಿರಿ ಎಂದು, ಅದರೆ ಇಷ್ಟೂ ಸಹ ತಿಳಿದುಕೊಂಡಿಲ್ಲ ಮನುಷ್ಯರ ಮೊದಲನೇ ಮರ್ಯಾದೆ ಯಾವುದು? ಎಂದು. ಮನುಷ್ಯನ ಮೊದಲನೇ ಮರ್ಯಾದೆ ಆಗಿದೆ ನಿರ್ವಿಕಾರಿಯಾಗುವುದು, ಒಂದುವೇಳೆ ಯಾರನ್ನಾದರೂ ಕೇಳಿ ನೀವು ಈ ಮರ್ಯಾದೆಯಲ್ಲಿ ನಡೆದುಕೊಳ್ಳುತ್ತಿರುವಿರಾ? ಆಗ ಹೇಳುತ್ತಾರೆ ಈ ಕಲಿಯುಗೀ ಸೃಷ್ಟಿಯಲ್ಲಿ ಈಗ ನಿರ್ವಿಕಾರಿಯಾಗುವ ಸಾಹಸ ಇಲ್ಲ ಎಂದು. ಈಗ ಮುಖದಿಂದ ಮರ್ಯಾದೆಯಲ್ಲಿರು, ನಿರ್ವಿಕಾರಿಯಾಗು ಎಂದು ಹೇಳುವುದರಿಂದ ಯಾರೂ ನಿರ್ವಿಕಾರಿಗಳಾಗಲು ಸಾಧ್ಯವಿಲ್ಲ. ನಿರ್ವಿಕಾರಿಗಳಾಗಬೇಕಾದರೆ ಮೊದಲು ಈ ಜ್ಞಾನದ ಖಡ್ಗದಿಂದ ಈ ಐದು ವಿಕಾರಗಳ ಬೀಜಗಳನ್ನು ಸಮಾಪ್ತಿ ಮಾಡಬೇಕು ಆಗಲೇ ವಿಕರ್ಮ ಭಸ್ಮವಾಗುವುದು. ಒಳ್ಳೆಯದು.